ಉತ್ಸವ ಮೂರ್ತಿಯನ್ನು ಹೊತ್ತು ರಾತ್ರೋ ರಾತ್ರಿ ಅರೆ ಶಬ್ದ ಮಾಡದೆ ಯಾರೂ ಕಾಣದ ಜಾಗದಲ್ಲಿ ಕೆಲಸ ಮುಗಿಸಿ ಬಂದರು. ಇದಕ್ಕೆ ಒಂದೇ ಕಾರಣ. ಸರ್ಕಾರಿ ಆದೇಶ ಉಪವಿಭಾಗಾಧಿಕಾರಿಗಳಿಗೆ ಬಂದರೆ ಪೊಲೀಸರು ಈ ಕಾರ್ಯ ನಡೆಸಲು ಬಿಡದೆ ತೊಂದರೆ ಮಾಡಬಹುದು. ಅಮ್ಮನವರಿಗೆ ಅಪಚಾರವಾಗುತ್ತದೆ ಎಂದು. ಊರಿನ ಭವಿಷ್ಯದ ದೃಷ್ಟಿಯಿಂದ ಒಳಿತು ಮಾಡಬೇಕೆಂದು, ಯಾರೂ ಕಾಣದ ಕಡೆ ಹೋಗಿ ಮಾರಮ್ಮನ ಎದುರು ಕೋಣದ ಬಲಿ ಮತ್ತು ಬಾನದ ಆಟ ನಡೆದೇ ಹೋಯಿತು. ಊರ ಒಳಗೆ ನಡೆದಿದ್ದರೂ ಈ ಕಾರ್ಯವನ್ನು ಯಾರೂ ನೋಡುತ್ತಿರಲಿಲ್ಲ. ಇದಕ್ಕೆ ಸಂಬಂಧಪಟ್ಟವರು ಮಾತ್ರವೇ ಇರುವುದು. ಬೆಳಕು ಹರಿಯುವುದರಲ್ಲಿ ಏನೂ ಆಗಿಲ್ಲವೆಂಬಂತೆ ಅರ್ಚಕರು ಮಾರಮ್ಮನಿಗೆ ಸೀರೆ, ಹೂವಿನಲಂಕಾರ ಮಾಡಿರುತ್ತಾರೆ. ತಾಯಿ ಸಂತೃಪ್ತಿಯಾಗಿ ವಿಜೃಂಭಿಸುತ್ತಾಳೆ. ಜನರ ಜಾತ್ರೆ ಮತ್ತೆ ಕಲೆಯುತ್ತದೆ, ಗಾವು ಹಾಗಲ್ಲ, ಸುತ್ತಮುತ್ತಲಿನ ಹಳ್ಳಿ ಊರುಗಳಿಂದ ಜನ ಸೇರುತ್ತಾರೆ.

* * *

ಬಹಳ ನಿರೀಕ್ಷಿತ 'ಗಾವು' ಸಿಗಿಯುವ ಹತ್ತನೇ ದಿನ ಹತ್ತಿರ ಬಂದಿತು. ಊರ ತುಂಬಾ ಜನ ಜನ. ಕಣ್ಣೆದುರಿಗೆ ನಡೆಯುವ ಮನೋರಂಜನಾತ್ಮಕ ಹಿಂಸೆಯನ್ನು ಮೈಮನ ನವಿರೇಳಿಸಿಕೊಳ್ಳುವ ಆವೇಗವನ್ನು ಅನುಭವಿಸಲು ಜನ ಜಮಾಯಿಸ್ತಾರೆ. ಪೋತರಾಜನಿಗೆ ಬಣ್ಣದ ವೇಷ ಹಾಕಿ, ಕೊರಳಿಗೆ ಹಾರ ಹಾಕಿ ಹುರಿದುಂಬಿಸಲು ಊರ ತುಂಬ ಮೆರವಣಿಗೆ ಮಾಡಿ ಜೋರಾಗಿ ಬಡಿಯುತ್ತ ಅವನ ಮಾನಸಿಕ ಬಲವನ್ನು ಇಮ್ಮಡಿಗೊಳಿಸುತ್ತಾರೆ. ದಾರಿಯುದ್ದಕ್ಕೂ ನೂರಾರು ಎಳನೀರು, ಬಾಳೆ ಗೊನೆಯನ್ನು, ಕೈಗೆ ಕೊಟ್ಟದ್ದನ್ನೆಲ್ಲಾ ನಿಮಿಷದಲ್ಲಿ ಮುಗಿಸುತ್ತಾನೆ. ಕಾಲಿಗೆ ಗೆಜ್ಜೆ ಕಟ್ಟಿ ಕುಣಿಯುತ್ತ, ಸ್ವಲ್ಪ ಬಿರುಸಾಗಿ ನಡೆಯುತ್ತ ಕೂದಲನ್ನು ಉದ್ದಕ್ಕೆ ಭುಜದ ಸುತ್ತ ಬಿರಿಹೊಯ್ದುಕೊಂಡಂತೆ, ಹಣೆಗೆ ಅರಿಸಿನದಲ್ಲಿ ಮೂರು ಎಳೆ ಪಟ್ಟಿ ಎಳೆದು ಮಧ್ಯೆ ಕುಂಕುಮವನ್ನು ದುಂಡಗೆ ಅಗಲವಾಗಿ ಇಟ್ಟಿರುತ್ತಾರೆ. ಒಟ್ಟಿನಲ್ಲಿ ಪೋತರಾಜ ಭಯಹುಟ್ಟಿಸುವಂತೆ ಅಲಂಕೃತನಾಗಿ ಜನಗಳ ಗುಂಪಿನ ಮಧ್ಯದಲ್ಲಿ ದಾರಿ ಮಾಡಿಕೊಂಡು ಹೋತನನ್ನು ಬಲಿತೆಗೆದುಕೊಳ್ಳುವ ವೇದಿಕೆ ಮೇಲೆ ಪ್ರವೇಶ ಮಾಡುತ್ತಾನೆ. ಈ ಬಾರಿಯೂ ಈ ಭವ್ಯ ದೃಶ್ಯ ನೋಡಲು ಸಾಕಷ್ಟು ಜನಸಾಗರ ಹರಿದು ಬಂದಿದೆ. ಮಾಂಸದಂಗಡಿಗಳು, ಸಾರಾಯಿ ಶಾಪ್‌ಗಳು, ಬೋಂಡ ಬಜ್ಜಿಯಂಗಡಿಗಳು, ಹೋಟೆಲ್, ಸಿನಿಮಾ ಮಂದಿರ ಎಲ್ಲಾ ತುಂಬಿ ತುಳುಕುತ್ತಿದೆ. ಸಂಜೆ ಐದು ಗಂಟೆ ವೇಳೆಗೆ ಊರೆಲ್ಲ ಸ್ತಬ್ದವಾಯಿತು. ಜನರೆಲ್ಲ ಈ 'ಗಾವು' ನಡೆಯುವ ಸ್ಥಳಕ್ಕೆ ಹಾಜರಾದರು. ನಿಂತುಕೊಳ್ಳಲು ಶಕ್ತಿ ಇಲ್ಲದಿದ್ದರೂ ಮಾರಮ್ಮ ತಾಯಿ ಇದನ್ನು ನೋಡಲು ಶಕ್ತಿ ಕೊಡುತ್ತಾಳೆ. ಅರೆ ಶಬ್ದದ ಆರ್ಭಟ ಎದೆ ಗಡಗಡ ಎನ್ನುವಂತ ಶಬ್ದದೊಂದಿಗೆ ಪೋತರಾಜ ಒಂದು ಗಂಟೆ ಕುಣಿಯುತ್ತಲೆ ಇದ್ದ. ಅವನ ಕಾಲಿನ ಗೆಜ್ಜೆ ಶಬ್ದ ಯಾವುದೋ ಹಿಂಸೆಯ ಸಂಕಟವಾಗಿತ್ತೇ ಹೊರತು, ಇಂಪಾಗಿರಲಿಲ್ಲ. ಮಕ್ಕಳೆಲ್ಲ ಕಣ್ಣುಮುಚ್ಚಿಕೊಂಡು ತಾಯಿ ಸೆರಗಲ್ಲಿ ಅವಿತರು. ಈ ಬೀಭತ್ಸ ರೋಮಾಂಚನಕ್ಕೆ ಮನೆಗೆ ಬೀಗ ತಗಲಿಸಿ ಹೆಣ್ಣುಮಕ್ಕಳು ಬಂದುಬಿಟ್ಟಿದ್ದರು. ಯಾವುದೂ ಇಲ್ಲಿ ವೈಜ್ಞಾನಿಕವಲ್ಲ, ಕೇವಲ ಆವೇಶ ಅಷ್ಟೆ. ಹಿಂಸೆಯನ್ನು ಆಧ್ಯಾತ್ಮಿಕಗೊಳಿಸುವ ಒಂದು ಮೌಢ್ಯ ಅಷ್ಟೆ. ಇಲ್ಲಿ ಸರ್ಕಾರಿ ಅಧಿಕಾರಿಗಳು, ಟೀವಿ ಮಾಧ್ಯಮದವರು ಬರುವಂತಿಲ್ಲ. ಎಂ.ಎಲ್.ಎ. ಗೌರಿಶಂಕರ್, ಪುರಸಭೆ ಅಧ್ಯಕ್ಷರು, ಸರಪಂಚರು, ಅರ್ಚಕರು, ಮಾರಮ್ಮನ ಜಾತ್ರೆ ಮಂಡಲಿಯವರು ಮತ್ತೆ ಜನ.

ಇತ್ತ ಉಪವಿಭಾಗಾಧಿಕಾರಿ ಕಾರ್ಯಾಲಯದಿಂದ ವಿಜ್ಞಾನ ಸಂಘದವರು ಶ್ರೀರಾಮ್ ನೇತೃತ್ವದಲ್ಲಿ, ಪ್ರಾಣಿದಯಾ ಸಂಘದವರು ಮಂಜುನಾಥ್ ಎಂಬುವರ ನೇತೃತ್ವದಲ್ಲಿ ಉಪವಿಭಾಗಾಧಿಕಾರಿ ಸುಜನ್ ನಿರ್ದೇಶನದಲ್ಲಿ 'ಗಾವು' ನಡೆಯುವ ಸ್ಥಳಕ್ಕೆ ವಿರೋಧಿಸುವ ಬ್ಯಾನರ್ ಕಟೌಟ್‌ಗಳನ್ನು ಹಿಡಿದು ಹೋರಾಟಕ್ಕೆ ಹೊರಟಂತೆ ಸಿದ್ಧರಾದರು. ಜತೆಗೆ ಹತ್ತು ಜನ ಪೊಲೀಸ್ ಪೇದೆಗಳು ಸುತ್ತುವರೆದರು. ಇದು ಕೇವಲ ವಿಚಾರ ಕ್ರಾಂತಿಯ ಮೊದಲ ಹೆಜ್ಜೆ. ಜನರ ಮೌಢ್ಯಕ್ಕೆ ಬೇರೆ ಆಯುಧ ಇರಲಿಲ್ಲ. ಸುಜನ್ ಆ ಘಟನೆ ನಡೆಯುವ ಸ್ಥಳಕ್ಕೆ ಹೋಗಲಿಲ್ಲ. ಆದರೆ ಆ ಸಂಘಟನೆಗಳಿಗೆ ನಿರ್ದೇಶನ ನೀಡಿ ಪ್ರೋತ್ಸಾಹಿಸಿ ಉಪವಿಭಾಗಾಧಿಕಾರಿಗಳ ಕಾರ್ಯಾಲಯದಿಂದಲೇ ಆದೇಶ ಹೊರಡಿಸಿ ಶ್ರೀರಾಮ್ ಕೈಲಿ ಕಳುಹಿಸಿದ್ದ.

ಇತ್ತ ಪೋತರಾಜನ ವೇಷದಲ್ಲಿ ಆವೇಶಗೊಂಡಿದ್ದ ಗಾವು ಸಿಗಿಯುವವ ಮೀಸೆಯನ್ನು ಹುರಿ ಮಾಡಿ,